

ಆ ಜಮೀನಿನಲ್ಲಿ ಆಗ ಕಾಳುಕಡಿಯಂಥ ಬೆಳೆಗಳು ಒತ್ತಟ್ಟಿಗಿರಲಿ, ಅಲ್ಲಿ ಹುಲ್ಲು ಕಡ್ಡಿ ಸಹ ಬೆಳೆಯುತ್ತಿರಲಿಲ್ಲ. ಕೇವಲ ಮಳೆಯ ಮೇಲೆ ಬೆಳೆಯನ್ನು ತೆಗೆಯುತ್ತಿದ್ದ ಆ ಕಾಲದಲ್ಲಿ ಕಲ್ಲವ್ವನೇ ವರ್ಷಾನುವರ್ಷಗಟ್ಟಲೆ ಒಡಕಿ ಮಾಲಿದ್ದ ವಿಶಾಲವಾದ ಬಯಲೊಳಗೆ ತುಂಬುಕೊಂಡಿದ್ದ ಗುಂಡು ಕಲ್ಲುಗಳನ್ನು ದಿನವೂ ಆರಿಸಿ ತೆಗೆದು, ಆ ಜಮೀನಿನ ನಾಕೂ ದಂಡೆಗೆ ಒಡ್ಡು ಕಟ್ಟಿದವರಂಗೆ ತಂದು ಹಾಕುವುದರ ಮೂಲಕ ಅದಕ್ಕೆ ಬೆಳೆ ತೆಗೆಯಬಲ್ಲ ಜಮೀನಿನ ಆಕಾರ ತಂದುಕೊಟ್ಟಿದ್ದಳು. ಆದರೆ, ಆಕೆ ಹಾಗೆ ದಿನವೂ ಜಮೀನಿನಲ್ಲಿ ಕಲ್ಲು ಆರಿಸಿದರ ಫಲವಾಗಿ ಆಕೆಯ ಎರಡೂ ಕೈ ಬೆರಳುಗಳು ಕುಷ್ಠರೋಗ ತಾಗಿದವರಂಗೆ ಮೊಂಡಾಗಿ ಹೋಗಿದ್ದವು! ಇದೆಲ್ಲ ಹುಚ್ಚಪ್ಪನಿಗೆ ತಿಳಿಯಲಾರದ ವಿಷಯವೇನೂ ಆಗಿರಲಿಲ್ಲ. ಮಹಾ ಲಜ್ಜೆಗೇಡಿಯಂತಿದ್ದ ಆತನಿಗೆ ಹೀಗೆ ತನ್ನ ಹೆಂಡತಿಯ ಕೈಬೆರಳುಗಳು ಮೊಂಡಾಗಿ ಹೋದ ಬಗ್ಗೆ ಎಳ್ಳಷ್ಟೂ ಕನಿಕರವಿರಲಿಲ್ಲ. ಒಂದೇ ಮಾತಿನಲ್ಲಿ